ಪರಿಶಿಷ್ಟ ಜಾತಿ

1997-98 - 2367.42 ಲಕ್ಷ ರೂ.ಗಳು

1998-99 - 2946.05 ಲಕ್ಷ ರೂ.ಗಳು

1999-2000 - 2988.69 ಲಕ್ಷ ರೂ.ಗಳು

ಪರಿಶಿಷ್ಟ ವರ್ಗ

1996-97 - 1083.42 ಲಕ್ಷ ರೂ.ಗಳು

1997-98 - 742.895 ಲಕ್ಷ ರೂ.ಗಳು

1998-99 - 882.81 ಲಕ್ಷ ರೂ.ಗಳು

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದ ವಿವಿಧ ಇಲಾಖೆಗಳಿಗೆ ಬರಬೇಕಾದ ಹಣ

387 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿವಿಧ ಇಲಾಖೆಗಳಿಗೆ ವಿಶೇಷ ಘಟಕ ಯೋಜನೆಯಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಒದಗಿಸಲಾದ ಮೊತ್ತವೆಷ್ಟು?

ಆ) ಕೇಂದ್ರ ಮತ್ತು ರಾಜ್ಯ ಸರ್ಕಾರ ಒದಗಿಸಿದ ಹಣದಲ್ಲಿ ಖರ್ಚು ಮಾಡಿರುವ ಮೊತ್ತವೆಷ್ಟು? (ವಿವರ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ವಿಶೇಷ ಘಟಕ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಒದಗಿಸಲಾದ ಮೊತ್ತದ ವಿವರ ಈ ಕೆಳಕಂಡಂತಿದೆ.

ನಿಗದಿಪಡಿಸಿದ ಹಣ (ರೂ. ಕೋಟಿಗಳಲ್ಲಿ)		
ಕೇಂದ್ರ	ರಾಜ್ಯ	ಒಟ್ಟು
52.22	1177.77	1229.99

ಆ) ವಿಶೇಷ ಘಟಕ ಯೋಜನೆಯಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಒದಗಿಸಿದ ಹಣದಲ್ಲಿ ಖರ್ಚು ಮಾಡಿರುವ ಮೊತ್ತದ ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ಕ್ರ.ಸಂ.	ವರ್ಷ	ಖರ್ಚು		
		ಕೇಂದ್ರ	ರಾಜ್ಯ	ಒಟ್ಟು
1.	1996-97	19.68	322.11	341.79
2.	1997-98	14.34	324.29	338.63
3.	1998-99	18.20	353.39	371.59

ರಾಜ್ಯದ ರೋಗಗ್ರಸ್ಥ ಜವಳಿ ಉದ್ಯಮಗಳ ಪುನಃಶ್ಚೇತನ

388 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೋಗಗ್ರಸ್ಥ ಜವಳಿ ಉದ್ಯಮಿಗಳಿಗೆ ಪುನಶ್ಚೇತನ ನೀಡಲು ರೂಪಿಸಲಾದ ಕಾರ್ಯಕ್ರಮಗಳೇನು?

ಆ) ರಾಜ್ಯದಲ್ಲಿ ಇರುವ ರೋಗಗ್ರಸ್ಥ ಜವಳಿ ಉದ್ಯಮಗಳ ಸಂಖ್ಯೆ ಎಷ್ಟು? ಮತ್ತು ಅವುಗಳು ಯಾವುವು?

ಇ) ರಾಜ್ಯದಲ್ಲಿ ಒಟ್ಟು ಎಷ್ಟು ಕೈಮಗ್ಗಗಳಿವೆ. ಈ ಕೈ ಮಗ್ಗಗಳಿಗೆ ವಿದ್ಯುತ್ ಕೊರತೆ ಹಾಗೂ ಮಾರುಕಟ್ಟೆ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಖಾಸಗಿ ವಲಯದಲ್ಲಿರುವ ರೋಗಗ್ರಸ್ಥ ಜವಳಿ ಉದ್ಯಮಗಳಿಗೆ ಪುನಶ್ಚೇತನ ನೀಡುವ ಬಗ್ಗೆ ಬಿ.ಐ.ಎಫ್.ಆರ್. (ಬೋರ್ಡ್ ಫಾರ್ ಇಂಡಸ್ಟ್ರಿಯಲ್ ಫೈನಾನ್ಸ್ ಅಂಡ್ ರೀಕನ್‌ಸ್ಟ್ರಕ್ಷನ್) ಕ್ರಮ ಕೈಗೊಳ್ಳುತ್ತದೆ. ಇದು ರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿದ್ದು ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ಬರುತ್ತದೆ. ಸಹಕಾರಿ ವಲಯದ ರೋಗಗ್ರಸ್ಥ ಜವಳಿ ಉದ್ಯಮಗಳಿಗೆ ಪುನಶ್ಚೇತನ ಕಾರ್ಯಕ್ರಮವನ್ನು ರಾಜ್ಯ ಸರ್ಕಾರವು ರೂಪಿಸಬೇಕಾಗಿದ್ದು ಪುನಶ್ಚೇತನದ ಸಾಧ್ಯಾಸಾಧ್ಯತೆಗಳ ಬಗ್ಗೆ ಸಮಗ್ರವಾದ ಅಧ್ಯಯನವೊಂದನ್ನು ಮಾಡಿ, ಅಧ್ಯಯನ ವರದಿಯ ಆಧಾರದ ಮೇಲೆ ಪುನಶ್ಚೇತನ ಕಾರ್ಯಕ್ರಮಗಳನ್ನು ರೂಪಿಸಲು ಯೋಜಿಸಲಾಗಿದೆ. ಅಧ್ಯಯನ ವರದಿ ತಯಾರಿಸುವ ಕಾರ್ಯವನ್ನು ಖಾಸಗಿ ಸಂಸ್ಥೆಗೆ ವಹಿಸಲು ಸರ್ಕಾರದ ಅನುಮೋದನೆಯಾಗಿದ್ದು, ಪ್ರಕ್ರಿಯೆಗಳು ಪ್ರಗತಿಯಲ್ಲಿವೆ.